# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.

## O S No.213/2018

DW-2

| | | |
|---|---|---|
| ಹೆಸರು | : | ಶಿವಕುಮಾರ |
| ತಂದೆ/ಗಂಡನ ಹೆಸರು | : | ರುದ್ರಪ್ಪ |
| ವಯಸ್ಸು | : | 70 ವರ್ಷ |
| ವೃತ್ತಿ | : | ನಿವೃತ್ತ ನೌಕರ |
| ವಾಸ ಸ್ಥಳ | : | ಚಕ್ರಬಾವಿ, ಮಾಗಡಿ ತಾಲ್ಲೂಕು |
| ದಿನಾಂಕ | : | 24-03-2026. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಪ್ರತಿವಾದಿಯ ಪರ ಶ್ರೀ ಹೆಚ್ ಜೆ. ವಕೀಲರಿಂದಃ-

ದೊಡ್ಡೇರಿ ಗ್ರಾಮದ ವೀರಣ್ಣ ಮತ್ತು ಅವರ ಮಗ ಪ್ರಕಾಶ್ ರವರು ಗೊತ್ತು. ಸದರಿ ಪ್ರಕಾಶ್ ರವರು ನಮ್ಮ ಡಿಪೋ ಮ್ಯಾನೇಜರ್ ಅಗಿದ್ದರು. ನಾನು ಅವರ ಅಧೀನದಲ್ಲಿ ಕೆಲಸ ಮಾಡುತ್ತಿದ್ದೇ. ಅವರ ನನಗೆ ಸಂಬಂಧಿ. ಪ್ರತಿವಾದಿಗಳು ಗೊತ್ತು. ವಾದಿ ಮತ್ತು ಪ್ರತಿವಾದಿಗಳ ನಡುವೆ ಅಗ್ರಿಮೆಂಟ್ ಅಗಿತ್ತು ಅದು ಹಣದ ಅಗ್ರಿಮೆಂಟ್ . ಏನು ಹಣ ಎಂದರೆ ಸಾಕ್ಷಿ ಬಡ್ಡಿಗಾಗಿ 6 ಲಕ್ಷವನ್ನು ಪ್ರಕಾಶ್ ರವರು ತಂದೆಯ ಮುಖಾಂತರ ಪ್ರತಿವಾದಿಗಳಿಗೆ ಕೊಡಿಸಿದ್ದರು. 6 ಲಕ್ಷವನ್ನು ಚೆಕ್ಕು ಮುಖಾಂತರ ಸಾಲದ ರೂಪದಲ್ಲಿ ಶೇ.3 ಬಡ್ಡಿಗೆ ಕೊಡಿಸಿದ್ದರು . ಸದರಿ ಹಣ ಪ್ರಕಾಶ್ ರವರಿಗೆ ಸೇರಿದ ಹಣ . ಅ ಹಣವನ್ನು ಅವರ ತಂದೆಯ ಮುಖಾಂತರ ಕೊಡಿಸಿದ್ದರು. ಪ್ರಕಾಶ್ ರವರು ಬಡ್ಡಿ ವ್ಯವಹಾರ ಸಹ ಮಾಡಿತ್ತಿದ್ದರು. ಪ್ರತಿವಾದಿಗಳಿಂದ ಬದ್ರತೆಗಾಗಿ ಅಗ್ರಿಮೆಂಟ್ ಮಾಡಿಸಿಕೊಂಡರು. ಅಗ್ರಿಮೆಂಟನ್ನು ಪ್ರಕಾಶರವರು ತಯಾರು ಮಾಡಿಸಿದ್ದರು. ಅಗ್ರಿಮೆಂಟ ಅದದ್ದು 31.10.2015 ರಲ್ಲಿ . ಸದರಿ ಅಗ್ರಿಮೆಂಟನ್ನು ನೋಡಿದರೆ ಗುರುತಿಸಬಲ್ಲೇ. ಅದು ನಿಪಿ 2 ಅಗಿದೆ. ನನ್ನ ಸಹಿಯನ್ನು ನಿಪಿ 2(ಎಂ) ಎಂದು ಈಗಾಗಲೇ ಗುರುತಿಸಲಾಗಿದೆ. ನಿಪಿ 2 ರ ಬಗ್ಗೆ

ವೀರಣ್ಣರವರಿಗೆ ಮಾಹಿತಿ ಗೊತ್ತಾ ಎಂದರೆ ಗೊತ್ತು. ನಿಪಿ 2 ಕ್ಕೆ ಸಹಿಯನ್ನು ಸಬ್ ರಿಜಿಸ್ಟ್ರರ ಕಛೇರಿಯಲ್ಲಿ ಮಾಡಿದೆ. ನನ್ನ ಸಮಕ್ಷಮ ವಾದಿ ಪ್ರತಿವಾದಿಗಳ ನಡುವೆ ಕ್ರಯದ ಸಂಬಂಧ ಮಾತುಕತೆ ಅಗಿಲ್ಲ.

<u>ಪಾಟೀ ಸವಾಲು ಅರ್ಜಿದಾರರ/ಎದುರುದಾರರ ಪರ ವಕೀಲರಿಂದಃ-</u>

ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.